# ಕಪ್ಪು ಚಿರತೆಯ ಹಾದಿಯಲ್ಲಿ ಕಂಡ ಕಾವ್ಯದ ತುಣುಕುಗಳು

**ನಾಗರಹೊಳೆ ಕಾಡಿನಲ್ಲಿ ಕಪ್ಪು ಚಿರತೆ 'ಬ್ಲಾಕಿ'ಯನ್ನು ಹುಡುಕುತ್ತಾ ಹೊರಟ ಛಾಯಾಗ್ರಾಹಕರು ಕೊನೆಗೆ ಕಂಡುಕೊಂಡಿದ್ದು ಕಾವ್ಯದ ಅನುಭವವನ್ನು. ಚಿರತೆ ನೋಟದ ಮೂರ್ತ ಅನುಭವ ದಕ್ಕದೆ ಹೋದರೂ ಆ ಪ್ರಕ್ರಿಯೆಯಲ್ಲಿ ಕಾಡು ಹೊಸದಾಗಿ ತೆರೆದುಕೊಂಡ ಬಗೆ ನೀಡುವ ಸಂತೋಷ ಸಣ್ಣದೇನಲ್ಲ. ಯಾವುದೋ ಗುರಿಯನ್ನು ತಲುಪಲು ಹೊರಟು, ಅನಿರೀಕ್ಷಿತವಾಗಿ ಬೇರೊಂದು ದಾರಿಯನ್ನು ಹಿಡಿದಾಗ ಅನಾವರಣಗೊಳ್ಳುವ ಬೆರಗು ಹಾಗೂ ಬೆಡಗು ಎರಡನ್ನೂ ಈ 'ಫೋಟೊ ಪ್ರಬಂಧ' ಓದುಗರಿಗೆ ನೀಡುವಂತಿದೆ.**

■ ಲೋಕೇಶ್ ಮೊಸಳೆ

ಮೌನವಾಗಿತ್ತು. ಅಲ್ಲೊಂದು ಇಲ್ಲೊಂದು ಕುಟ್ರಹಕ್ಕಿ ಕುಟುರ್ ಕುಟ್ರುರ್sss ಎನ್ನುತ್ತಿದ್ದರೆ ದೂರದಲ್ಲೆಲ್ಲೋ ಸಿಂಗಳೀಕ (ಲಂಗೂರ್, **Hanuman Langur**) ತನ್ನ ಇರುವಿಕೆಯ ಸ್ಥಳ ಸೂಚಿಸಲು ಗುಂ... ಗುಮ್sss ಧ್ವನಿಯನ್ನು ಹೊರಡಿಸುತ್ತಿತ್ತು. ನಂತರ ಮತ್ತದೇ ಕಾಡಿನ ನೀರವಮೌನ.

ಅಂಥ ಮೌನದ ಹಾದಿಯಲ್ಲಿ ನನ್ನ ಜೊತೆಗಿದ್ದ ಪ್ರಭುಗಣೇಶ್ ಅವರು ಜೀಪ್ ಚಾಲಕ – ನ್ಯಾಚುರಲಿಸ್ಟ್ ರಾಜೇಶ್ ಅವರಿಗೆ, 'ಬ್ಲಾಕಿ'ಗೆ ಟ್ರೈ ಮಾಡೋಣವಾ?' ಎಂದರು.

'ಆಗಲಿ ಸರ್. ನಿನ್ನೆ ಸಂಜೆ ಬಿಸಲ್ವಾಡಿ ಜಂಕ್ಷನ್‌ನಿಂದ ಬಲಕ್ಕೆ ಕೈಮರದ ಕಡೆಗೆ ಪಾಸಾಗಿದೆ. ಕೆವಿ ಟ್ಯಾಂಕ್, ಬಳ್ಳೆ, ಪವರ್‌ಲೈನ್ ನೋಡ್ಕೊಂಡು ಬಿಸಲ್ವಾಡಿ ಮೈನ್ ರೋಡ್‌ಗೆ ಬರೋಣ, ಇವತ್ತು ಚಾನ್ಸ್ ಇರುತ್ತೆ ಸಾರ್' ಎಂಬ ಭರವಸೆ ನೀಡಿದರು ನ್ಯಾಚುರಲಿಸ್ಟ್ ರಾಜೇಶ್.

ಕಳೆದ ಹನ್ನೊಂದು ವರ್ಷಗಳಿಂದ ಕಬಿನಿ, ನಾಗರಹೊಳೆ ಕಾಡಿನತ್ತ ಸುಳಿಯದಿದ್ದ ಹವ್ಯಾಸಿ ಛಾಯಾಗ್ರಾಹಕ ಪ್ರೊಫೆಸರ್ ರಾಮಕೃಷ್ಣಯ್ಯನವರು ನಾಗರಹೊಳೆಯ 'ಕಪ್ಪುಚಿರತೆ' ಕಥೆಗಳನ್ನು ಕೇಳಿದ್ದರು. ಮೊಬೈಲ್ ಫೋನ್‌ನಲ್ಲಿ ಸಾಮಾನ್ಯ ಪ್ರವಾಸಿಗರಿಂದ ಹಿಡಿದು ಇತ್ತೀಚಿನ ಸಣ್ಣಪುಟ್ಟ ಛಾಯಾಗ್ರಾಹಕರೆಲ್ಲ ಸೆರೆಹಿಡಿದಿದ್ದ ಬ್ಲಾಕಿಯ ಚಿತ್ರಗಳನ್ನು ನೋಡಿದ್ದ ಪ್ರೊಫೆಸರ್, 'ಏನಾದರಾಗಲಿ, ಒಂದಷ್ಟು ಚಿತ್ರ ತೆಗೆಯಲೇಬೇಕೆಂಬ ಮಹತ್ವಾಕಾಂಕ್ಷೆಯಲ್ಲಿ ವೈಡು, ಮಿಡ್ಡು, ಜೂಮ್, ಟೆಲಿ ಲೆನ್ಸ್‌ಗಳನ್ನೆಲ್ಲ ಅಂದರೆ 12ಎಂ.ಎಂ. ನಿಂದ 600 ಎಂ.ಎಂ. ಲೆನ್ಸ್‌ವರೆಗೆ ಮೂರ್ನಾಲ್ಕು ಕ್ಯಾಮೆರಾಗಳನ್ನು ಬಗಲಲ್ಲಿ ಪೇರಿಸಿಕೊಂಡು ಬಂದಿದ್ದರು. ಅವರ ಕನಸನ್ನು ನನಸುಗೊಳಿಸಲು ಪ್ರಭುಗಣೇಶ್ ಧ್ವನಿಯಾಗಿದ್ದರು. ನಾವೆಲ್ಲ ಸಾಥ್ ನೀಡಿದ್ದೆವು. ನ್ಯಾಚುರಲಿಸ್ಟ್ ರಾಜೇಶ್ ಅವರು ತಮ್ಮೆಲ್ಲ ಅನುಭವವನ್ನು ಧಾರೆ ಎರೆದು ಕಣ್ಣು ಕಿವಿ ಮೂಗುಗಳನ್ನೆಲ್ಲ ಜಾಗ್ರತಗೊಳಿಸಿಕೊಂಡಿದ್ದರು.

ಕೈಮರ ರಸ್ತೆಯ ನಿರ್ದಿಷ್ಟ ಸ್ಥಳವೊಂದರಲ್ಲಿ ಸುಮಾರು ಮೂವತ್ತು ನಿಮಿಷ ನಿಂತು

ಪ್ರಕೃತಿಗೆ ಜೀವಸ್ಪರ್ಶ ನೀಡುವಂತಿರುವ ಹಕ್ಕಿಸ್ಪರ್ಶ

